# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 45(58) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಐವನ್ ಡಿಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 15.07.2024 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಗಳೂರು ವಿಶ್ವವಿದ್ಯಾನಿಲಯದ ಆಧೀನಕ್ಕೆ ಒಳಪಡುವ ಕಾಲೇಜುಗಳನ್ನು ಆರ್ಥಿಕ ಅಡಚಣೆಯಿಂದ ಮುಚ್ಚಲು ತೀರ್ಮಾನಿಸಲಾಗಿದೆ ಎಂಬ ವರದಿ ನಿಜವೇ; ಆರ್ಥಿಕ ಅಡಚಣೆಗೆ ಕಾರಣಗಳೇನು; | ಮಂಗಳೂರು ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಡುವ ಕಾಲೇಜುಗಳನ್ನು ಆರ್ಥಿಕ ಅಡಚಣೆಯಿಂದ ಮುಚ್ಚಲು ತೀರ್ಮಾನಿಸಲಾಗಿರುವುದಿಲ್ಲ. ಬದಲಾಗಿ ವಿಶ್ವವಿದ್ಯಾನಿಲಯವು ತೀವ್ರ ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಈ ಘಟಕ ಕಾಲೇಜುಗಳನ್ನು ಕಾಲೇಜು ಶಿಕ್ಷಣ ಇಲಾಖೆಯು ವಹಿಸಿಕೊಳ್ಳಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ದಿನಾಂಕ.07.06.2024ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.<br><br>ಮಂಗಳೂರು ವಿಶ್ವವಿದ್ಯಾಲಯದ ಕಾಲೇಜುಗಳಿಗೆ ಸರ್ಕಾರದ ಅನುದಾನ ಇಲ್ಲದಿರುವುದರಿಂದ ಮತ್ತು ಅನುದಾನಿತ (ಮಂಜೂರಾದ) ಸಿಬ್ಬಂದಿಗಳು ಇಲ್ಲದಿರುವುದರಿಂದ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಖರ್ಚು ವೆಚ್ಚಗಳನ್ನು ಭರಿಸಿ ನಡೆಸಿಕೊಂಡು ಬರಲಾಗುತ್ತಿದೆ. |
| (ಆ) | ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಎಷ್ಟು ಕಾಲೇಜುಗಳಿವೆ; ಅದರಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಟ್ಟು 178 ಕಾಲೇಜುಗಳಿವೆ. ಅದರಲ್ಲಿ ಒಟ್ಟು 75,178 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. (ವಿವರ **ಅನುಬಂಧ-1**) |
| (ಇ) | ಮಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರುಗಳಿಗೆ ನಿವೃತ್ತಿ ಸೌಲಭ್ಯಗಳನ್ನು ನೀಡದೇ ಬಾಕಿ ಇರುವುದು ನಿಜವೇ; ಈ ಬಗ್ಗೆ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಟ್ಟು 33 ಮಂದಿ ನಿವೃತ್ತ ಸಿಬ್ಬಂದಿಗಳಿಗೆ ನಿವೃತ್ತಿ ಸೌಲಭ್ಯಗಳನ್ನು ಪಾವತಿಸಿರುವುದಿಲ್ಲ. ಸರ್ಕಾರದಿಂದ ವಿಶ್ರಾಂತಿ ವೇತನಕ್ಕೆ 2023-24 ಮತ್ತು 2024-25ನೇ ಸಾಲಿನಲ್ಲಿ ತಲಾ ರೂ.10.00 ಕೋಟಿಗಳನ್ನು ಮಂಜೂರು ಮಾಡಲಾಗಿದ್ದು, ವಿಶ್ರಾಂತಿ ವೇತನ ಪಾವತಿಗೆ ರೂ.50.21 ಕೋಟಿ ಅನುದಾನ ಕೊರತೆಯಾಗಿರುತ್ತದೆ. |

...2

ವಿಶ್ವವಿದ್ಯಾಲಯದಿಂದ ಹೆಚ್ಚುವರಿ ವಿಶ್ರಾಂತಿ ವೇತನ ಅನುದಾನ ರೂ.23,80,38,034.00ನ್ನು ಮಂಜೂರು ಮಾಡಲು ಕೋರಲಾಗಿದ್ದು, ಇದಕ್ಕೆ ಪ್ರತಿಯಾಗಿ ಆರ್ಥಿಕ ಇಲಾಖೆಯು ಪಿಂಚಣಿ ಹಾಗೂ ಪಿಂಚಣಿ ಸೌಲಭ್ಯಗಳ ಪಾವತಿಗಾಗಿ ಕೊರತೆಯಾಗಿರುವ ಅನುದಾನವನ್ನು ವಿಶ್ವವಿದ್ಯಾಲಯವು ತನ್ನ ಆಂತರಿಕ ಸಂಪನ್ಮೂಲದಿಂದ ಭರಿಸುವಂತೆ ಮತ್ತು ಈ ಉದ್ದೇಶಕ್ಕಾಗಿ ಹೆಚ್ಚುವರಿ ಅನುದಾನವನ್ನು ಒದಗಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತದೆ.

**(ಈ)** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ 2021 ರಿಂದ 2024ರ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನ ಎಷ್ಟು; ಕೇಂದ್ರದಿಂದ ಪಡೆದ ಅನುದಾನ ಎಷ್ಟು? (ವಿವರ ನೀಡುವುದು)

**ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ**

| | 2020-21 | 2021-22 | 2022-23 | 2023-24 | 2024-25 |
|---|---|---|---|---|---|
| ವೇತನ | 56,55,89,128/- | 52,61,00,000/- | 59,24,00,000/- | 62,10,00,000.00 | 60,25,07,000.00 |
| ವಿಶ್ರಾಂತಿ ವೇತನ | 5,69,00,063/- | 5,74,00,000/- | 25,61,00,000/- | 10,00,00,.000.00 | 10,00,00,000.00 |
| ಅಭಿವೃದ್ಧಿ | 25,00,000/- | - | - | - | - |
| ಎಸ್.ಸಿ.ಪಿ/ಟಿ ಎಸ್ ಪಿ | 25,00,000/- | - | 71,23,000,00 | 79,00,000.00 | - |
| ಅರೆ ಭಾಷೆ ಸಂಶೋಧನಾ ಕೇಂದ್ರ | - | - | 2,00,00,000/- | - | - |
| ಸ್ನಾತಕೋತ್ತರ ಅಧ್ಯಯನ ಮತ್ತು ಆತ್ಯಾಧುನಿಕ ಸಂಶೋದನಾ ಕೇಂದ್ರ, ಬೆಳಪು | | - | - | 5,00,00,000.00 | - |

**ಕೇಂದ್ರ ಸರ್ಕಾರದಿಂದ 2021- ರಿಂದ 2024ರವರೆಗೆ ಬಿಡುಗಡೆಯಾದ ಅನುದಾನ**

| ವರ್ಷ | ಯೋಜನೆ | ಬಿಡುಗಡೆಯಾದ ಅನುದಾನ |
|---|---|---|
| 2021-22 | MCJ – Speccial Assistance Programme Sanctioned by UGC | 1,06,841.00 |
| 2021-22 | Women's Studies Centre – Sanctioned by UGC | 11,24,509.00 |
| 2021-22 | Botany- Major Research Project (MRP) Sanctioned by UGC | 1,29,177.00 |
| 2021-22 | CSEIP – Salary Grant Sanctioned by UGC | 1,43,18,108.00 |
| 2022-23 | Women's Studies Centre Sanctioned by UGC | 6,88,460.00 |
| 2023-24 | CSEIP – Salary Grant Sanctioned by UGC | 74,06,479.00 |

**ಸಂಖ್ಯೆ: ಇಡಿ/115 /ಯುಡಿವಿ/2024**

**(ಡಾ|| ಎಂ.ಸಿ. ಸುಧಾಕರ್)**
ಸಚಿವರು, ಉನ್ನತ ಶಿಕ್ಷಣ ಇಲಾಖೆ

ಡಾ.ಎಂ.ಸಿ ಸುಧಾಕರ್ ಎಂ.ಡಿ.ಎಸ್
ಉನ್ನತ ಶಿಕ್ಷಣ ಸಚಿವರು